ಬಿ)	ಬೌರಿಂಗ್ ಆಸ್ಪತ್ರೆಯಲ್ಲಿ	-	03
ಸಿ)	ನಿಮಾನ್ಸ್ ಆಸ್ಪತ್ರೆಯಲ್ಲಿ	-	02
ಡಿ)	ಜಯದೇವ ಹೃದ್ರೋಗ ಆಸ್ಪತ್ರೆ	-	02
ಇ)	ಟಿ.ಬಿ.ಸ್ಯಾನಿ ಟೋರಿಯಂನಲ್ಲಿ	-	04
ಎಫ್)	ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯದಲ್ಲಿ	-	04
			29

ಇ) ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಇರುವ ವೈದ್ಯರ ಸಂಖ್ಯೆ: 3. ಕೇಂದ್ರ ಕಾರಾಗೃಹದಲ್ಲಿ ರೋಗಪೀಡಿತ ಬಂಧಿಗಳಿಗೆ ಸೂಕ್ತ ಪ್ರಥಮ ಚಿಕಿತ್ಸೆ ನೀಡಿ ನಂತರ ಅವರುಗಳ ಹೆಚ್ಚಿನ ಚಿಕಿತ್ಸೆಗಾಗಿ ಹೊರ ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತಿದ್ದು, ಬಂಧಿಗಳು ಮೃತರಾದ ನಂತರ ಮುಂದಿನ ಚಿಕಿತ್ಸೆ ನೆಪ ನೀಡಿ ಹೊರ ಆಸ್ಪತ್ರೆಗಳಿಗೆ ಕಳುಹಿಸುತ್ತಿರುವ ವಿಚಾರ ಸತ್ಯಕ್ಕೆ ದೂರವಾದುದಾಗಿದೆ.

ಈ) ಜೈಲಿನ ವೈದ್ಯರುಗಳು ಕರ್ತವ್ಯಕ್ಕೆ ಸರಿಯಾದ ಸಮಯಕ್ಕೆ ಸರದಿ ಪ್ರಕಾರ ಹಾಜರಾಗುತ್ತಿದ್ದಾರೆ. ವಿಚಾರಣಾಧೀನ ಖೈದಿಗಳನ್ನು ಅನಗತ್ಯವಾಗಿ ಸೇರಿಸಲು ಮತ್ತು ಹೊರಗಿಡಲು ವೈದ್ಯಾಧಿಕಾರಿಗಳು ಅವಕಾಶ ಮಾಡಿಕೊಡುತ್ತಿದ್ದಾರೆಂಬ ಹಾಗೂ ಅಗತ್ಯವಿರುವಾಗ ಖೈದಿಗಳಿಗೆ ಚಿಕಿತ್ಸೆ ದೊರಕದೆ ಸಾವಿಗೀಡಾಗುತ್ತಿದ್ದಾರೆಂಬ ಅಂಶ ಸತ್ಯಕ್ಕೆ ದೂರವಾಗಿರುತ್ತದೆಯಾದ್ದರಿಂದ ಇಂತಹ ವೈದ್ಯರುಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸಲಾರದು.

ರಾಜ್ಯದಲ್ಲಿ ಡಿಸ್ಪಿಲರಿಗಳ ಮಾಹಿತಿ

145 (292)

ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಡಿಸ್ಪಿಲರಿಗಳು ಎಷ್ಟು? (ಅವುಗಳ ವಿವರ ನೀಡುವುದು)

ಆ) ಪ್ರತಿ ಡಿಸ್ಪಿಲರಿಯಿಂದ ಉತ್ಪಾದನೆಯಾದ ವಿವಿಧ ಬಗೆಯ ಮದ್ಯವೆಷ್ಟು?

ಇ) ಎಷ್ಟು ಡಿಸ್ಟಿಲರಿಗಳ ವಿರುದ್ಧ ಕಾನೂನು ಉಲ್ಲಂಘನೆಯ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ?

ಶ್ರೀ ಎಂ.ಎಂ.ನಾಣಯ್ಯ (ಅಬಕಾರಿ ರಾಜ್ಯ ಸಚಿವರು):

ಅ) 75 (ವಿವರಗಳನ್ನು ಅನುಬಂಧ 'ಅ'ದಲ್ಲಿ ತೋರಿಸಿದೆ)

	1998-99	1999-2000
ಅಬಕಾರಿ ವರ್ಷ		(ಫೆಬ್ರುವರಿ ವರೆಗೆ)
	(ಲಕ್ಷ ಲೀಟರ್‌ಗಳಲ್ಲಿ)	
ಭಾರತೀಯ ಮದ್ಯ:	520.81	341.67
ಫೆನ್ನಿ	: 12.19	10.94

(ವಿವರಗಳನ್ನು ಅನುಬಂಧ-'ಬಿ' ಮತ್ತು 'ಸಿ' ಯಲ್ಲಿ 7 ಡಿಸ್ಟಿಲರಿಗಳು (1999-2000ನೇ ವರ್ಷದಲ್ಲಿ ತೋರಿಸಲಾಗಿದೆ)

ರಾಜ್ಯದಲ್ಲಿ ಪಡಿತರ ಚೀಟಿ ವಿತರಣೆ.

146 (443)

ಶ್ರೀ ಬಚ್ಚೇಗೌಡ ಬಿ.ಎನ್.(ಹೊಸಕೋಟೆ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಡು ಬಡವರನ್ನು ಗುರುತಿಸಿ ಅವರಿಗೆ 20 ಕೆ.ಜಿ. ಪಡಿತರ ಆಹಾರ ಧಾನ್ಯಗಳನ್ನು ಹಂಚಲು ಸರ್ಕಾರ ಯೋಚಿಸಿದೆಯೆ?

ಆ) ಕೇಂದ್ರ ಸರ್ಕಾರದ ಧೋರಣೆಯನ್ವಯ ಸಬ್ಸಿಡಿ ರೂಪದಲ್ಲಿ ಪಡಿತರ ವ್ಯವಸ್ಥೆಯನ್ನು ಜಾರಿಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಪಡಿತರ ಸೀಮೆಎಣ್ಣೆ, ಆಹಾರ ನೀಡುವ ಕಾರ್ಡುದಾರರಿಗೆ ಕಾರ್ಡು ನೀಡಿಕೆಯಲ್ಲಿ ಹೊಸ ನೀತಿಯನ್ನೇನಾದರೂ ಸರ್ಕಾರದ ಯೋಚಿಸಿದೆಯೆ?